I/467436/2023

**ಕರ್ನಾಟಕ ಸರ್ಕಾರ**

**ನಿರ್ದೇಶಕರ ಕಛೇರಿ, ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ), 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು-560012**

**ಇ-ಮೇಲ್:commissioner.pue@gmail.com ಸ್ಥಿರ ದೂರವಾಣಿ ಸಂ:080-23562033**

**ಸಂಖ್ಯೆ:DPUE-EST10OTRS/148/2023-PLCY(E096150) ದಿನಾಂಕ:09-08-2023**

**ಜ್ಞಾಪನ**

ವಿಷಯ: 2023-24 ನೇ ಶೈಕ್ಷಣಿಕ ಸಾಲಿನಲ್ಲಿ ಶಾಲಾ ಶಿಕ್ಷಣ ಇಲಾಖೆ (ಸರ್ಕಾರಿ ಪದವಿ ಪೂರ್ವ ಕಾಲೇಜುಗಳ) ಪ್ರಾಂಶುಪಾಲರ ಹಾಗೂ ವಿವಿಧ ವಿಷಯಗಳ ಉಪನ್ಯಾಸಕರ ಕೋರಿಕೆ ವರ್ಗಾವಣೆಯನ್ನು ಕೌನ್ಸೆಲಿಂಗ್ ಮೂಲಕ ನಡೆಸುವ ಬಗ್ಗೆ.

ಉಲ್ಲೇಖ:
1. ಸರ್ಕಾರದ ಅಧಿಸೂಚನೆ ಸಂಖ್ಯೆ: ಸಂವ್ಯಶಾಇ 12 ಶಾಸನ 2020, ದಿನಾಂಕ: 27/03/2020.
2. ಸರ್ಕಾರದ ಅಧಿಸೂಚನೆ ಸಂಖ್ಯೆ: ಸಂವ್ಯಶಾಇ 47 ಶಾಸನ 2021, ದಿನಾಂಕ:18/01/2022.
3. ಸರ್ಕಾರದ ಪತ್ರ ಸಂಖ್ಯೆ: ಇಪಿ 84 ಎಸ್‌ಹೆಚ್‌ಹೆಚ್ 2023 ದಿನಾಂಕ:26/06/2023
4. ಈ ಕಚೇರಿ ಸಮ ಸಂಖ್ಯೆವರ್ಗಾವಣಾ ಮಾರ್ಗಸೂಚಿ ದಿನಾಂಕ:10/07/2023.
5. ಈ ಕಚೇರಿ ಸಮ ಸಂಖ್ಯೆವರ್ಗಾವಣಾ ಮಾರ್ಗಸೂಚಿ ದಿನಾಂಕ: 02/08/2023.

-*-

ಶಾಲಾ ಶಿಕ್ಷಣ ಇಲಾಖೆಯ (ಸರ್ಕಾರಿ ಪದವಿ ಪೂರ್ವ ಕಾಲೇಜುಗಳ) ಪ್ರಾಂಶುಪಾಲರ ಹಾಗೂ ವಿವಿಧ ವಿಷಯಗಳ ಉಪನ್ಯಾಸಕರ ವರ್ಗಾವಣೆಯನ್ನು ನಡೆಸಲು ಉಲ್ಲೇಖ-(1) ಮತ್ತು (2)ರ ಆದೇಶಗಳಲ್ಲಿ ಹಾಗೂ ಉಲ್ಲೇಖ-(3)ರ ಪತ್ರದನ್ವಯ ಅವಕಾಶ ಕಲ್ಪಿಸಿ ಆದೇಶಿಸಲಾಗಿದೆ. ಅದರಂತೆ, ಶಾಲಾ ಶಿಕ್ಷಣ ಇಲಾಖೆಯ (ಸರ್ಕಾರಿ ಪದವಿ ಪೂರ್ವ ಕಾಲೇಜು) ಪ್ರಾಂಶುಪಾಲರ ಹಾಗೂ ಉಪನ್ಯಾಸಕರಿಗೆ ಆನ್-ಲೈನ್ ಮೂಲಕ ಅರ್ಜಿ ಸಲ್ಲಿಸಲು ಉಲ್ಲೇಖ-(4)ರ ವರ್ಗಾವಣಾ ಮಾರ್ಗಸೂಚಿಯಲ್ಲಿ ತಿಳಿಸಲಾಗಿ, ಒಟ್ಟು 82 ಪ್ರಾಂಶುಪಾಲರು ಮತ್ತು 2397 ಉಪನ್ಯಾಸಕರುಗಳು ವಿವಿಧ ಆದ್ಯತೆಯಡಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ವಿವಿಧ ಆದ್ಯತೆಯಡಿ ಸಲ್ಲಿಸಲಾದ ಅರ್ಜಿಗಳನ್ನು ಪರಿಶೀಲಿಸಿ, ಅಪೂರ್ಣ ದಾಖಲೆಗಳನ್ನು ಸಲ್ಲಿಸಿದ 189 ಅರ್ಜಿಗಳನ್ನು KEPT IN ABEYANCE ನಲ್ಲಿ ಪ್ರಕಟಿಸಿ, ಆಕ್ಷೇಪಣೆಗಳನ್ನು ಸಲ್ಲಿಸಲು ಉಲ್ಲೇಖ-5ರಲ್ಲಿ ತಿಳಿಸಲಾಗಿತ್ತು. ಪ್ರಕಟಿತ ಪಟ್ಟಿಗೆ ಬಂದಂತಹ ಆಕ್ಷೇಪಣೆಗಳನ್ನು ನಿಯಮಾನುಸಾರ ಪರಿಶೀಲಿಸಿ, 65 ಅರ್ಜಿಗಳನ್ನು ತಿರಸ್ಕರಿಸಿ, ವಿವಿಧ ಆದ್ಯತೆಯಡಿಯಲ್ಲಿ ಹಾಗೂ ಇತರೆ ವರ್ಗದಲ್ಲಿ (ಯಾವುದೇ ಆದ್ಯತೆಯಿಲ್ಲದಿರುವ) ಸಲ್ಲಿಸಲಾದ ಅರ್ಜಿಗಳ ಅಂತಿಮ ಜೇಷ್ಠತಾ ಪಟ್ಟಿಯನ್ನು ಹಾಗೂ ಶಾಲಾ ಶಿಕ್ಷಣ ಇಲಾಖೆಯ (ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ) ಖಾಲಿಯಿರುವ ವಿವಿಧ ವಿಷಯಗಳ ಉಪನ್ಯಾಸಕರ ಹುದ್ದೆಗಳ ಪಟ್ಟಿಯನ್ನು ಇದರೊಂದಿಗೆ ಲಗತ್ತಿಸಿ, ಪ್ರಕಟಿಸಿದೆ. ಪ್ರಕಟಿಸಲಾದ ಅಂತಿಮ ಅರ್ಹತಾ ಪಟ್ಟಿ ಹಾಗೂ ಖಾಲಿ ಹುದ್ದೆಗಳ ಪಟ್ಟಿಯಲ್ಲಿ ಯಾವುದೇ ರೀತಿಯ ಬದಲಾವಣೆಗಳಿಗೆ ಅವಕಾಶ ಇರುವುದಿಲ್ಲ.

ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ವಿವಿಧ ವಿಷಯಗಳ ಉಪನ್ಯಾಸಕರ ಸ್ಥಳ ನಿಯುಕ್ತಿ ವರ್ಗಾವಣೆ ಕೌನ್ಸೆಲಿಂಗ್ ಅನ್ನು ದಿನಾಂಕ:10-08-2023ರಿಂದ 22/08/2023ರವರೆಗೆ ಬೆಳಗ್ಗೆ 10-00 ಗಂಟೆಯಿಂದ ಪ್ರಾರಂಭಿಸಿ, ಮುಕ್ತಾಯವಾಗುವವರೆಗೆ ಕೆಸ್ವಾನ್ (KSWAN) ಮೂಲಕ ಆಯೋಜಿಸಿದ್ದು, ರಾಜ್ಯದ ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳಲ್ಲಿ ಕೆಸ್ವಾನ್ ಕೊಠಡಿಯಲ್ಲಿ ವ್ಯವಸ್ಥೆ ಮಾಡಲು ಜಿಲ್ಲಾ ಉಪ ನಿರ್ದೇಶಕರಿಗೆ ತಿಳಿಸಿದೆ. ಒಂದು ವೇಳೆ ಜಿಲ್ಲಾಧಿಕಾರಿಗಳ ಕೆಸ್ವಾನ್ ಕೊಠಡಿ ಲಭ್ಯವಿಲ್ಲದ ಪಕ್ಷದಲ್ಲಿ, ಜಿಲ್ಲಾ ಪಂಚಾಯತ್ ಅಥವಾ ಜಿಲ್ಲಾ ಶಿಕ್ಷಣ ತರಬೇತಿ ಸಂಸ್ಥೆ(DIET) ಕಚೇರಿಯಲ್ಲಿ ವ್ಯವಸ್ಥೆ ಮಾಡಿ, ಸಂಬಂಧಿಸಿದ ಪ್ರಾಂಶುಪಾಲರು / ಉಪನ್ಯಾಸಕರಿಗೆ ನಿಗಧಿತ ಕೌನ್ಸೆಲಿಂಗ್ ಸಮಯಕ್ಕಿಂತ ಮುಂಚಿತವಾಗಿ

ತಿಳಿಯಪಡಿಸಲು ಸೂಚಿಸಿದೆ. ವಿವಿಧ ವಿಷಯಗಳ ಕೌನ್ಸೆಲಿಂಗ್ ವೇಳಾಪಟ್ಟಿಯನ್ನು ಖಾಲಿ ಹುದ್ದೆಗಳ ಮಾಹಿತಿಯೊಂದಿಗೆ ಕಾಲಕಾಲಕ್ಕೆ ಇಲಾಖಾ ಜಾಲತಾಣದಲ್ಲಿ ಪ್ರಕಟಿಸಲಾಗುವುದು.

ಜಿಲ್ಲಾ ಉಪ ನಿರ್ದೇಶಕರು ಹಾಗೂ ಸ್ಥಳನಿಯುಕ್ತಿ ವರ್ಗಾವಣೆ ಕೌನ್ಸೆಲಿಂಗ್‌ಗೆ ಹಾಜರಾಗುವ ಪ್ರಾಂಶುಪಾಲರು/ಉಪನ್ಯಾಸಕರುಗಳು ಕೌನ್ಸೆಲಿಂಗ್ ಸಮಯದಲ್ಲಿ ಕಡ್ಡಾಯವಾಗಿ ಪಾಲಿಸಬೇಕಾದ ಸೂಚನೆಗಳು ಈ ಕೆಳಕಂಡಂತಿದೆ:

1. ಜಿಲ್ಲಾ ಉಪ ನಿರ್ದೇಶಕರು/ಕಚೇರಿ ಸಿಬ್ಬಂದಿ ವರ್ಗದವರು ವಿವಿಧ ಆದ್ಯತೆಯಡಿ ಸಲ್ಲಿಸಲಾದ ಪ್ರಾಂಶುಪಾಲರ / ಉಪನ್ಯಾಸಕರ ಮೂಲ ದಾಖಲೆಗಳನ್ನು ಕೂಲಂಕುಷವಾಗಿ ಪರಿಶೀಲಿಸತಕ್ಕದ್ದು.
2. ವಿವಿಧ ಆದ್ಯತೆ ಅಡಿ ಸಲ್ಲಿಸಲಾದ ಪ್ರಾಂಶುಪಾಲರು / ಉಪನ್ಯಾಸಕರುಗಳನ್ನು ಕೌನ್ಸೆಲಿಂಗ್ ನಡೆಯುವ ಸಂದರ್ಭದಲ್ಲಿ ಪ್ರಕಟಿಸಲ್ಪಟ್ಟ ಅಂತಿಮ ಪ್ರಾಂಶುಪಾಲರ / ಉಪನ್ಯಾಸಕರ ಅರ್ಹತಾ ಪಟ್ಟಿಯ ಅನುಸಾರ ಸ್ಥಳ ಆಯ್ಕೆಗೆ ಅವಕಾಶ ಕಲ್ಪಿಸಲಾಗುವುದು.
3. ಸ್ಥಳ ನಿಯುಕ್ತಿ ಕೌನ್ಸೆಲಿಂಗ್‌ಗೆ ಹಾಜರಾಗಿ, ಸ್ಥಳ ಆಯ್ಕೆ ಮಾಡಿಕೊಳ್ಳುವ ಪ್ರಾಂಶುಪಾಲರು / ಉಪನ್ಯಾಸಕರುಗಳು ವರ್ಗಾವಣೆ ಬಯಸಿ ಸಲ್ಲಿಸಲಾದ ಆನ್-ಲೈನ್ ಅರ್ಜಿಯ ಪ್ರತಿಯನ್ನು ಉಪ ನಿರ್ದೇಶಕರ ಕಚೇರಿ ಅಧಿಕಾರಿ / ಸಿಬ್ಬಂದಿ ಪರಿಶೀಲಿಸಲು ಕಡ್ಡಾಯವಾಗಿ ಸಲ್ಲಿಸಲು ಸೂಚಿಸಿದೆ.
4. ವಿವಿಧ ಆದ್ಯತೆ ಅಡಿ ಸಲ್ಲಿಸಲಾದ ಪ್ರಾಂಶುಪಾಲರು / ಉಪನ್ಯಾಸಕರುಗಳು ವರ್ಗಾವಣೆಗೆ ಸಂಬಂಧಿಸದಂತೆ ಆನ್‌ಲೈನ್‌ನಲ್ಲಿ ಸಲ್ಲಿಸಿರುವ ಅಗತ್ಯ ದಾಖಲೆಗಳ ಮೂಲ ಪ್ರತಿಯನ್ನು ಕೌನ್ಸೆಲಿಂಗ್ ಸಂದರ್ಭದಲ್ಲಿ ಅಧಿಕಾರಿಗಳಿಗೆ ಪರಿಶೀಲನೆಗೆ ಸಲ್ಲಿಸುವುದು ಕಡ್ಡಾಯವಾಗಿರುತ್ತದೆ. ಒಂದೊಮ್ಮೆ ದಾಖಲೆಗಳನ್ನು ಸಲ್ಲಿಸದಿದ್ದಲ್ಲಿ ಅಥವಾ ತಪ್ಪು / ನಕಲಿ ದಾಖಲೆಗಳನ್ನು ಸಲ್ಲಿಸಿದ್ದಲ್ಲಿ, ಅಂತಹ ಪ್ರಾಂಶುಪಾಲರು / ಉಪನ್ಯಾಸಕರನ್ನು ಕೌನ್ಸೆಲಿಂಗ್‌ನಲ್ಲಿ ಸ್ಥಳ ಆಯ್ಕೆಗೆ ಅವಕಾಶ ನೀಡಲಾಗುವುದಿಲ್ಲ.
5. ಸ್ಥಳ ನಿಯುಕ್ತಿ ಕೌನ್ಸೆಲಿಂಗ್‌ಗೆ ಹಾಜರಾಗಿ, ಸ್ಥಳ ಆಯ್ಕೆ ಮಾಡಿಕೊಳ್ಳುವ ಪ್ರಾಂಶುಪಾಲರು / ಉಪನ್ಯಾಸಕರುಗಳು ಇಲಾಖೆಯಿಂದ ನೀಡಲಾಗಿರುವ ಗುರುತಿನ ಚೀಟಿಯನ್ನು ಹಾಗೂ ಉಪ ನಿರ್ದೇಶಕರು / ಪ್ರಾಂಶುಪಾಲರಿಂದ ಪಡೆದಂತಹ ಸೇವಾ ದೃಢೀಕರಣ ಪತ್ರವನ್ನು ಪಡೆದಿಟ್ಟುಕೊಳ್ಳತಕ್ಕದ್ದು.
6. ಸ್ಥಳ ನಿಯುಕ್ತಿ ಕೌನ್ಸೆಲಿಂಗ್‌ಗೆ ಹಾಜರಾಗಿ ಸ್ಥಳ ಆಯ್ಕೆ ಮಾಡಿಕೊಳ್ಳುವ ಪ್ರಾಂಶುಪಾಲರು / ಉಪನ್ಯಾಸಕರುಗಳಿಂದ ಆಯ್ಕೆ ಮಾಡಿಕೊಳ್ಳುವ ಕಾಲೇಜಿನ ವಿವರದ ಬಗ್ಗೆ ಉಪ ನಿರ್ದೇಶಕರ ಕಚೇರಿ ಸಿಬ್ಬಂದಿಗಳು ಒಪ್ಪಿಗೆ ಪತ್ರವನ್ನು ಪಡೆದುಕೊಳ್ಳುವುದು.
7. ಸ್ಥಳ ನಿಯುಕ್ತಿ ವರ್ಗಾವಣೆ ಕೌನ್ಸೆಲಿಂಗ್‌ನಲ್ಲಿ ಆಯ್ಕೆ ಮಾಡಲಾದ ಸ್ಥಳವನ್ನು ಯಾವುದೇ ಕಾರಣಕ್ಕೂ ಬದಲಾಯಿಸಲು ಅಥವಾ ಮಾರ್ಪಾಡಿಸಲು ಅವಕಾಶವಿರುವುದಿಲ್ಲ.
8. ಸ್ಥಳ ನಿಯುಕ್ತಿ ವರ್ಗಾವಣೆ ಕೌನ್ಸೆಲಿಂಗ್ ಸಮಯದಲ್ಲಿ, ಶಿಸ್ತನ್ನು ಕಾಪಾಡಿಕೊಂಡು, ಸುಸೂತ್ರವಾಗಿ ಕೌನ್ಸೆಲಿಂಗ್ ಜರುಗುವಂತೆ ಅಗತ್ಯ ಕ್ರಮಕೈಗೊಳ್ಳಲು ಜಿಲ್ಲಾ ಉಪ ನಿರ್ದೇಶಕರ ಸಂಪೂರ್ಣ ಜವಾಬ್ದಾರಿಯಾಗಿರುತ್ತದೆ.

**(ಟಿಪ್ಪಣಿ ಮಾನ್ಯ ನಿರ್ದೇಶಕರಿಂದ ಅನುಮೋದಿಸಲ್ಪಟ್ಟಿದೆ)**

**Signed by Raju N**
**Date: 09-08-2023 19:07:13**

ಉಪ ನಿರ್ದೇಶಕರು (ಆಡಳಿತ),
ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ)

I/467436/2023

**ಇವರಿಗೆ:**

1. ರಾಜ್ಯದ ಎಲ್ಲಾ ಉಪ ನಿರ್ದೇಶಕರು, ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ)–ಮುಂದಿನ ಅಗತ್ಯ ಕ್ರಮಕ್ಕಾಗಿ.
2. ಶಾಲಾ ಶಿಕ್ಷಣ ಇಲಾಖೆಯ (ಸರ್ಕಾರಿ ಪದವಿ ಪೂರ್ವ ಕಾಲೇಜುಗಳ) ಎಲ್ಲಾ ಪ್ರಾಂಶುಪಾಲರುಗಳಿಗೆ - ಇಲಾಖಾ ಅಂತರ್ಜಾಲದ ಮುಖಾಂತರ – ಅಗತ್ಯ ಕ್ರಮಕ್ಕಾಗಿ.
3. ಶಾಲಾ ಶಿಕ್ಷಣ ಇಲಾಖೆಯ (ಸರ್ಕಾರಿ ಪದವಿ ಪೂರ್ವ ಕಾಲೇಜುಗಳ) ಎಲ್ಲಾ ಉಪನ್ಯಾಸಕರುಗಳಿಗೆ – ಇಲಾಖಾ ಅಂತರ್ಜಾಲದ ಮುಖಾಂತರ – ಅಗತ್ಯ ಕ್ರಮಕ್ಕಾಗಿ.

**ಪ್ರತಿ:**

1. ಮಾನ್ಯ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖಾ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು – 560 001 – ಮಾನ್ಯ ಸಚಿವರ ಗಮನಕ್ಕೆ ತರಲು ಕೋರಲಾಗಿದೆ.
2. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು – 560 001-ಮಾಹಿತಿಗಾಗಿ.
3. ರಾಜ್ಯದ ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳಿಗೆ – ಮಾಹಿತಿಗಾಗಿ.
4. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಹಣಾಧಿಗಳಿಗೆ – ಮಾಹಿತಿಗಾಗಿ.
5. ರಾಜ್ಯದ ಎಲ್ಲಾ ಉಪ ನಿರ್ದೇಶಕರು (ಅಭಿವೃದ್ಧಿ), ಜಿಲ್ಲಾ ಶಿಕ್ಷಣ ತರಬೇತಿ ಸಂಸ್ಥೆ(DIET) – ಮಾಹಿತಿಗಾಗಿ.
6. ಸಹಾಯಕ ನಿರ್ದೇಶಕರು, ಇ-ಆಡಳಿತ, ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ) ಬೆಂಗಳೂರು – ಇಲಾಖಾ ಜಾಲತಾಣದಲ್ಲಿ ಪ್ರಕಟಿಸುವುದು.
7. ಕಚೇರಿ/ಹೆಚ್ಚುವರಿ ಪ್ರತಿ.